**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5006/2026**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಡಾ. ಕಾವ್ಯ ತಿಮ್ಮಯ್ಯ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ಗಂಡನ ಹೆಸರು** | : | ಆದಿತ್ಯಾ ಭಗವಾನ್ | **24.06.2026** |
| **ವಯಸ್ಸು** | : | 45 ವರ್ಷ | |
| **ವೃತ್ತಿ** | : | ವೈದ್ಯಾಧಿಕಾರಿಗಳು, ಉಪವಿಭಾಗ ಆಸ್ಪತ್ರೆ, ಕೊಳ್ಳೇಗಾಲ | **ಪ್ರಾ.ಸಾಃ 5** |
| **ವಾಸ ಸ್ಥಳ** | : | ಕೊಳ್ಳೇಗಾಲ | **ಚಾ.ಸಾಃ 7** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು ಸೆಪ್ಟೆಂಬರ್ 2021 ರಿಂದ ಕೊಳ್ಳೇಗಾಲ ಉಪವಿಭಾಗ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿಃ 30.09.2025 ರಂದು ರಾತ್ರಿ 09.10 ಗಂಟೆಗೆ ಚಾಸಾ 1 ರವರು ನನ್ನ ಮೇಲೆ ಆರೋಪಿಯಿಂದ ಲೈಂಗಿಕ ಹಲ್ಲೆ ಆಗಿದೆ ಎಂಬ ಹಿನ್ನಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ನನ್ನ ಮನೆಯಲ್ಲಿ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದನು ಎಂದು ಹೇಳಿರುತ್ತಾರೆ. ಆಕೆಯ ಎರಡು ಎದೆಗಳ ಮೇಲೆ ಊತ ಕಂಡು ಬಂತು. ಯಾವುದೇ ಹೊರ ಗಾಯಗಳು ಕಂಡು ಬರಲಿಲ್ಲ. ಒಬ್ಬ ವ್ಯಕ್ತಿ ಚಾಸಾ 1 ರವರ ಎದೆಯನ್ನು ಅದುಮಿದರೆ ಊತ ಆಗುವ ಸಾಧ್ಯತೆ ಇರುತ್ತದೆ. ಚಾಸಾ 1 ರವರನ್ನು ಪರೀಕ್ಷೆ ಮಾಡಲು

ನನಗೆ ಪೋಲೀಸರಿಂದ ಮನವಿ ಬಂದಿರುತ್ತದೆ. ನಾನು ಮನವಿ ಪತ್ರದಲ್ಲೇ ನಾನು ಪರೀಕ್ಷೆ ಮಾಡಿದ ವಿವರಗಳನ್ನು ಬರೆದಿರುತ್ತೇನೆ. ದಾಖಲಾತಿಯನ್ನು ನಿಪಿ 10 ಎಂದು, ಸಾಕ್ಷಿ ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಬಿ.ಎನ್.ಆರ್ ವಕೀಲರಿಂದ**

ನಿಪಿ 10 ರಲ್ಲಿ ನಾನು ಚಿಕಿತ್ಸೆಗಳ ವಿವರಗಳನ್ನು ಬರೆದಿರುತ್ತೇನೆ. ಪ್ರತ್ಯೇಕವಾದ ಗಾಯದ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ. ನಿಪಿ 10 ರಲ್ಲಿ ನಾನು ಚಿಕಿತ್ಸೆ ನೀಡಿದ ದಿನಾಂಕ ಮತ್ತು ಸಮಯ ಕಂಡು ಬರುವುದಿಲ್ಲ. ನಿಪಿ 10 ರಲ್ಲಿ ಹೇಳಿರುವಂತೆ ಚಾಸಾ 1 ರವರ ಎದೆಯ ಮೇಲೆ ಯಾವುದೇ ಊತ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 10 ರಲ್ಲಿ ಹೇಳಿರುಂವಂತೆ ಊತದ ಚಿಹ್ನೆ ಹಾರ್ಮೋನ ಏರುಪೇರಾದರು ಉಂಟಾಗುತ್ತದೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ